| Form No.4 (Civil) Deposition Sheets (R.P.No.57) |
|---|

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 3/2017

ಪ್ರಾ.ಸಾ. 4 ಚಾ.ಸಾ 5

| | | |
|---|---|---|
| ಹೆಸರು | : | ಮೊಗಲಪ್ಪ |
| ತಂದೆಯ ಹೆಸರು | : | ಮಹಾದೇವಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಚಪೇಟ್ಲಾ |

## ಪ್ರಮಾಣ ವಚನ ಭೋಧಿಸಿದ ದಿನಾಂಕ: 24-12-2025
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-4 ನನ್ನ ತಂದೆ ಆಗಿರುತ್ತಾರೆ. ಚಾಸಾ-1 ನನ್ನ ತಮ್ಮನಾಗಿರುತ್ತಾರೆ. ಆರೋಪಿತರ ಪರಿಚಯ ಇರುತ್ತದೆ. ನಮ್ಮ ತಾತನಾದ ಮಾಶಪ್ಪನಿಗೆ ಐದು ಜನ ಮಕ್ಕಳು. ದೊಡ್ಡತನ ಹೆಸರು ಸಾಬಪ್ಪ ಎಂದು ಆತ ಈಗ ಮೃತಪಟ್ಟಿರುತ್ತಾನೆ. ಎರಡನೆಯವರು ಮಾಣಿಕಪ್ಪ, ಚಂದ್ರಪ್ಪ ಮಾಸ್ತರ್, ಅವರ ನಂತರ ನನ್ನ ತಂದೆ ಮಹಾದೇವಪ್ಪ, ನಂತರ ಸಿದ್ರಾಮಪ್ಪ ಈಗೆ ಐದು ಜನ ನನ್ನ ತಾತನಿಗೆ ಐದು ಜನ ಮಕ್ಕಳು ಇರುತ್ತಾರೆ. ಚಪೇಟ್ಲಾ ಗ್ರಾಮದಲ್ಲಿ ದೊಡ್ಡ ಮನೆ ಇದ್ದು ಆ ಮನೆಯಲ್ಲಿ ಚಂದ್ರಪ್ಪ ಮಾಸ್ತರ, ಮಹಾದೇವಪ್ಪ, ಸಿದ್ರಾಮಪ್ಪ ಇವರು ಆ ದೊಡ್ಡ ಮನೆಯಲ್ಲಿ ವಾಸವಾಗಿರುತ್ತಾರೆ. ಆ ಮನೆಯಲ್ಲಿ ಈ ಮೂರು ಜನರಿಗೆ ಪಾಲು ಆಗಿರುತ್ತದೆ. ಮೂರು ವರ್ಷಗಳಿಂದ ಚಂದ್ರಪ್ಪ ಮಾಸ್ತರ ಇವರು ನಮ್ಮ ತಂದೆಗೆ ಈ ಮನೆಯ ಒಳಗಡೆ ಬರಬೇಡಿ ಮತ್ತು ಇಲ್ಲಿ ಇರಬೇಡಿ ಎಂದು ಅನ್ನುತ್ತಿದ್ದರು. ಅದಕ್ಕೆ ನಮ್ಮ ತಂದೆಯವರಾದ ಚಾಸಾ-4 ಇವರು ಅವರ ದೊಡ್ಡವರು ಇರುತ್ತಾರೆ ಅಂದರೆ ಅನ್ನಲಿ ಅವರ ಜೊತೆ ಜಗಳ ತೆಗೆದುಕೊಳ್ಳಬೇಡಿ ಎಂದು ಹೇಳಿರುತ್ತಾರೆ.

2. ಸುಮಾರು 9 ವರ್ಷಗಳ ಹಿಂದೆ ಸಂಜೆ 7.00 ಗಂಟೆ ಸುಮಾರು ಚಂದ್ರಪ್ಪ ಮಾಸ್ತರ ಇವರು ಮಹಾದೇವಪ್ಪ ಮನೆಯಿಂದ ಹೊರಗಡೆ ಬಾ ಅಂತಾ

ಹೇಳಿರುತ್ತಾರೆ. ಆಗ ನಾನು, ಚಾಸಾ-4, ಚಾಸಾ-1 ಮನೆಯಿಂದ ಹೊರಗಡೆ ಬಂದಿರುತ್ತೇವೆ. ಆಗ ಚಾಸಾ-4 ಇವರು ಏನಾಗಿರುತ್ತದೆ ಎಂದು ಚಂದ್ರುಪ್ಪ ಮಾಸ್ತರಿಗೆ ಕೇಳಿರುತ್ತಾನೆ. ನೀವು ಮನೆ ಬಿಟ್ಟು ಹೋಗಿ ಇಲ್ಲದಿದ್ದರೆ ನಿಮ್ಮನ್ನು ಖಲಾಸ ಮಾಡುತ್ತೇವೆ ಎಂದು ಚಂದ್ರುಪ್ಪ ಮಾಸ್ತರ ಹೇಳಿರುತ್ತಾನೆ. ಅದಕ್ಕೆ ಚಾಸಾ-4 ಇವರು ಚಂದ್ರುಪ್ಪ ಮಾಸ್ತರ ಇವರಿಗೆ ನಾವು ಖಾಸ ಅಣ್ಣತಮ್ಮಂದಿರು ಇರುತ್ತೆವೆ ನಾವು ಎಲ್ಲಿಗೆ ಹೋಗಬೇಕು ಎಂದು ಚಂದ್ರುಪ್ಪ ಮಾಸ್ತರ ಇವರಿಗೆ ಕೇಳಿರುತ್ತಾರೆ. ಈಗ ಮೂರು ವರ್ಷಗಳಿಂದ ಹೇಳುತ್ತಿದ್ದೇನೆ ಪುನಃ ಮತ್ತೆ ಮತ್ತೆ ಇದೆ ಮಾತು ಕೇಳುತ್ತಿದ್ದೆ ಎಂದು ಚಂದ್ರುಪ್ಪ ಮಾಸ್ತರ ಇವರು ಚಾಸಾ-4 ರವರ ಕಪಾಳಕ್ಕೆ ಹೊಡೆದಿರುತ್ತಾನೆ. ಆಗ ಚಂದ್ರುಪ್ಪ ಮಾಸ್ತರ ಇವರು ಫೋನ ಮಾಡಿ 3 ನೇ ಆರೋಪಿ ಮತ್ತು ಅವರ ಮಕ್ಕಳನ್ನು ಕರೆಯಿಸಿರುತ್ತಾನೆ. ಸಾಕ್ಷಿದಾರರು ಪುನಃ ಹೇಳಿದ್ದು ಎಂದರೆ ಉಳಿದ ಆರೋಪಿತರನ್ನು ಕರೆಯಿಸಿರುತ್ತಾನೆ ಎಂದು ನುಡಿದಿರುತ್ತಾರೆ.  ಆಗ ಚಾಸಾ-4 ಇವರು ನನಗೆ ಮತ್ತು ನನ್ನ ತಮ್ಮನನ್ನು ಪೊಲೀಸ ಠಾಣೆಗೆ ದೂರು ಕೊಡಲು ಹೊಗೋಣ ಎಂದು ಕರೆದಿರುತ್ತಾರೆ. ಆಗ ನಾವು ದ್ವಿಚಕ್ರ ವಾಹನದಲ್ಲಿ ಹೋಗಿರುತ್ತೇವೆ. ಮನೆಯಲ್ಲಿ ಆದ ಘಟನೆ ಬಗ್ಗೆ ಪೊಲೀಸರಿಗೆ ಹೇಳಿರುತ್ತೇವೆ. ನಂತರ ನಾವು ಚಾಸಾ-1, 4 ಮತ್ತು ನಾನು ದ್ವಿಚಕ್ರ ವಾಹನದಲ್ಲಿ ಊರಿಗೆ ಬರುತ್ತಿದ್ದಾಗ ಚಪೆಟ್ಲಾ ಕ್ರಾಸ ಹತ್ತಿರ ಚಂದ್ರುಪ್ಪ ಮಾಸ್ತರ ಮತ್ತು ಉಳಿದ ಆರೋಪಿತರೆಲ್ಲರೂ ಕಮಾಂಡರ ಜೀಪಿನಲ್ಲಿ ಬಡಿಗೆ ತೆಗೆದುಕೊಂಡು ಚಪೇಟ್ಲಾ ಕ್ರಾಸ ಹತ್ತಿರ ಕಾಯುತ್ತಿದ್ದರು. 2 ನೇ ಆರೋಪಿ ಕಮಾಂಡರ ಜೀಪ ನಡೆಸುತ್ತಿದ್ದ. ಚಂದ್ರುಪ್ಪ ಮಾಸ್ತರ ಒಂದು ಕೈಯಲ್ಲಿ ಜೀಪ ಹಿಡಿದುಕೊಂದು ಇನ್ನೊಂದು ಕೈಯಲ್ಲಿ ಬಡಿಗೆಯನ್ನು ಹಿಡಿದುಕೊಂಡು ಇವರನ್ನು ಖಲಾಸ ಮಾಡಿ ಕಮಾಂಡರ ಜೀಪನಲ್ಲಿ ಕುಳಿತು ಹೇಳಿದಿದ್ದ. ಜೀಪ ನಡೆಸುವ ಅಂಜಪ್ಪನಿಗೂ ಸಹ ಅವರಿಗೆ ಗುದ್ದಿ ಖಲಾಸ ಮಾಡಿ ಎಂದು ಚಂದ್ರುಪ್ಪ ಮಾಸ್ತರ ಹೇಳುತ್ತಿದ್ದನು. ಹೇಳಿದ ನಂತರ ಕಮಾಂಡರ ಜೀಪನ್ನು ತೆಗೆದುಕೊಂಡು ನಮ್ಮನ್ನು ಹಿಂಬಾಲಿಸಿಕೊಂಡು ಬಂದಿರುತ್ತಾರೆ. ಚಪೇಟ್ಲಾ ಗೇಟ ಹತ್ತಿರದ ಬಸ ನಿಲ್ದಾಣದ ಗಣೇಶ ಕಟ್ಟೆಯ ಹತ್ತಿರ ಅಂಜಪ್ಪ ಜೀಪ ತೆಗೆದುಕೊಂಡು ಬಂದು ನಮ್ಮ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಮಾಡಿರುತ್ತಾನೆ. ನಾನು ಒಂದುಕಡೆ, ಚಾಸಾ-1 ಮತ್ತು 4 ಒಂದೊಂದು ಕಡೆ ಬಿದ್ದಿರುತ್ತೇವೆ. ಚಾಸಾ-4 ರವರ ಕೈ, ಕಾಲು ಮುರಿದು ತಲೆಗೆ ಪೆಟ್ಟಾಗಿ ತಲೆಯಿಂದ ರಕ್ತ

ಸೋರುತ್ತಿತ್ತು. ಚಾಸಾ-1 ರವರಿಗೆ ಎಡಗಾಲ ಮೋಣಕಾಲಿನ ಕೆಳಗಡೆ ಮುರಿದಿತ್ತು ಮತ್ತು ಎಡಗೈ ರಟ್ಟೆ ಮುರಿದಿತ್ತು ಮತ್ತು ತಲೆಗೆ ರಕ್ತಗಾಯವಾಗಿತ್ತು ಮತ್ತು ನನಗೆ ತೊಡೆಗೆ ಚೀರಿದ ಗಾಯವಾಗಿದ್ದು ಮತ್ತು ತಲೆಗೆ ಮತ್ತು ಮೈಯೆಲ್ಲಾ ಅಲ್ಲಲ್ಲಿ ರಕ್ತಗಾಯವಾಗಿತ್ತು. ಆಗ ನಾವು ಅಪ್ಪ, ಅಣ್ಣ ಅಂತಾ ಚೀರುತ್ತಿದ್ದೇವು. ಜೀಪು ಡಿಕ್ಕಿ ಮಾಡಿದಕ್ಕಾಗಿ ಜೀಪಿನಲ್ಲಿ ಇದ್ದಂತಹ ಚಂದ್ರಪ್ಪನಿಗೆ ಕೆಳಗೆ ಬಿದ್ದು ಪೆಟ್ಟಾಗಿದ್ದು ಊರಿನ ಜನರು ಬರುತ್ತಿದ್ದಾರೆ ನಮ್ಮ ಮೇಲೆ ಬರುತ್ತದೆ ಎಂದು ಅದೇ ಜೀಪಿನಲ್ಲಿ ಚಂದ್ರಪ್ಪನನ್ನು ಹಾಕಿಕೊಂಡು ಅಲ್ಲಿಂದ ಹೊರಟು ಹೋಗಿರುತ್ತಾರೆ. ಚಾಸಾ-6 ರಿಂದ 10 ರವರು ಬಂದು ನಮ್ಮನ್ನು ಆಂಬುಲೆನ್ಸಗೆ ಪೋನ ಮಾಡಿ ಆಂಬುಲೆನ್ಸನಲ್ಲಿ ಗುರುಮಠಕಲ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಸಾಕ್ಷಿದಾರರಿಗೆ ಈಗ ಜೀಪಿನ ಭಾವಚಿತ್ರಗಳನ್ನು ತೋರಿಸಲಾಗಿದ್ದು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.6 ರಿಂದ 9 ಎಂದು ಗುರುತಿಸಲಾಗಿದೆ. ಸಾಕ್ಷಿದಾರರಿಗೆ ಎರಡು ಕಟ್ಟಿಗೆಗಳನ್ನು ತೋರಿಸಲಾಗಿದ್ದು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ.

3. ಆಸ್ಪತ್ರೆಯಲ್ಲಿ ನಾನು ಪೊಲೀಸರಿಗೆ ಈ ಎಲ್ಲ ಘಟನೆ ಬಗ್ಗೆ ಹೇಳಿರುತ್ತೇನೆ. ಅಲ್ಲಿಂದ ಹೆಚ್ಚಿನ ಗುಲಬರ್ಗಾದ ದೊಡ್ಡ ಆಸ್ಪತ್ರೆಗೆ ಹೋಗಿರುತ್ತೇವೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಜಿ.ಬಿ.ಆರ್. ವಕೀಲರಿಂದ</u>

- ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.